# ಕಾರ್ಯಕ್ರಮದ ವರದಿ ಜನವರಿ-2023

**02.01.2023: ಆನ್‌ಲೈನ್ ನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಆರೋಗ್ಯ ಇಲಾಖೆ ಮತ್ತು ಕೊಪ್ಪಳದ ಗವಿಮಠವು ಆರೋಗ್ಯ ಇಲಾಖೆ ಸಿಬ್ಬಂದಿ, ಖಾಸಗಿ ಆಸ್ಪತ್ರೆ ಸಿಬ್ಬಂದಿ ಮತ್ತು ವೈದ್ಯರಿಗೆ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಕಾರ್ಯಕ್ರಮವನ್ನು ಗೂಗಲ್ ಮೀಟ್ ಮೂಲಕ ಏರ್ಪಡಿಸಲಾಗಿತ್ತು, ಕೊಪ್ಪಳ ಡಿಎಚ್ ಒ ಸಭೆಯನ್ನು ಆರಂಭಿಸಿ ಅಂಗಾಂಗ ದಾನದ ಕುರಿತು ಮಾತನಾಡಿದರು. ಜೀವಸಾರ್ಥಕಥೆ ಹುಬ್ಬಳ್ಳಿಯ ಅಂಗ ಕಸಿ ಸಂಯೋಜಕರಾದ ಶ್ರೀ ಮನೋಜ್ ನಾಯಕ್ ಸಭೆಯಲ್ಲಿ ಭಾಗವಹಿಸಿ ಅಂಗಾಂಗ ದಾನದ ಕುರಿತು ಮಾತನಾಡಿದರು. ಸಭೆಯಲ್ಲಿ 50 ಮಂದಿ ಉಪಸ್ಥಿತರಿದ್ದರು.

**04.01.2023: ಕೊಪ್ಪಳದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಗವಿಮಠ ಕೊಪ್ಪಳದ ವತಿಯಿಂದ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಕೊಪ್ಪಳದಲ್ಲಿ ಅಂಗಾಂಗ ದಾನ ಜಾಗೃತಿಗಾಗಿ ಮೇಘಾ ಜಾಥಾ ನಡೆಯಿತು. ಕೊಪ್ಪಳ ಜಿಲ್ಲಾಧಿಕಾರಿ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಕೊಪ್ಪಳ ಜಿಲ್ಲೆಯ ಸಿಇಒ ಮತ್ತು ಡಿಎಚ್‌ಒ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ದಾನಿಗಳ ಕುಟುಂಬಗಳನ್ನು ಅಭಿನಂದಿಸಲಾಯಿತು. 5000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 150 ಜನರು ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದರು. ಕೊಪ್ಪಳ ಡಿಎಚ್ ಒ ಕಛೇರಿಯಿಂದ ಸ್ಟಾಲ್ ಏರ್ಪಡಿಸಿ ಬಹುಮಾನ ವಿತರಣೆ ಮಾಡಲಾಯಿತು.








**07.01.2023: ಧಾರವಾಡದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಆರ್‌ಎಸ್‌ಬಿ ಇಂಡಸ್ಟ್ರಿ ಬೇಲೂರು ವತಿಯಿಂದ ಧಾರವಾಡದಲ್ಲಿ ಅಂಗಾಂಗ ದಾನ ಜಾಗೃತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು. ಜೀವಸಾರ್ಥಕಥೆ ಹುಬ್ಬಳ್ಳಿಯ ಅಂಗ ಕಸಿ ಸಂಯೋಜಕರಾದ ಶ್ರೀ ಮನೋಜ್ ನಾಯಕ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಂಗಾಂಗ ದಾನದ ಕುರಿತು ಮಾತನಾಡಿದರು ಮತ್ತು ಐಇಸಿ ಸಾಮಗ್ರಿಗಳನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.





**10.01.2023: ಧಾರವಾಡದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಧಾರವಾಡದ ಎನ್‌ಆರ್‌ಸಿ ಜಿಲ್ಲಾಸ್ಪತ್ರೆಯಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು, ಜೀವಸಾರ್ಥಕಥೆ ಹುಬ್ಬಳ್ಳಿಯ ಅಂಗ ಕಸಿ ಸಂಯೋಜಕರಾದ ಶ್ರೀ ಮನೋಜ್ ನಾಯಕ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಂಗಾಂಗ ದಾನದ ಕುರಿತು ಮಾತನಾಡಿ, ಐಇಸಿ ಸಾಮಗ್ರಿಗಳನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ 20ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.





**16.01.2023: ಅಂಗಾಂಗ ದಾನ ಮತ್ತು ಕಸಿ ಕಾರ್ಯಕ್ರಮದ ಅಧಿಕಾರಿ ಮತ್ತು ಸಿಬ್ಬಂದಿಗಳ ಸನ್ಮಾನ:**
ಬೆಂಗಳೂರು ವೈದ್ಯಕೀಯ ಸೇವಾ ಟ್ರಸ್ಟ್ (BMST)ಯ 40 ನೇ ವಾರ್ಷಿಕೋತ್ಸವದ ಅಂಗವಾಗಿ, ಕರ್ನಾಟಕ ರಾಜ್ಯದಲ್ಲಿ ಅಂಗಾಂಗ ದಾನ ಮತ್ತು ಕಸಿ ಕಾರ್ಯಕ್ರಮವನ್ನು ಹೆಚ್ಚಿಸುವಲ್ಲಿ SOTTO ಕರ್ನಾಟಕದ ಸಾಧನೆಯನ್ನು ಶ್ಲಾಘಿಸಲು, ಬೆಂಗಳೂರಿನ ಬಿಎಂಎಸ್‌ಟಿ ತಿಪ್ಪಸಂದ್ರ ಮುಖ್ಯರಸ್ತೆಯಲ್ಲಿ ಅನ್‌ಸಂಗ್ ಹೀರೋಸ್‌ಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು . ಈ ಕಾರ್ಯಕ್ರಮದಲ್ಲಿ ಯಶಸ್ವಿ ಅಂಗದಾನಕ್ಕಾಗಿ ಕಾರಣರಾದ ಜೀವಸಾರ್ಥಕತೆಯ ಅಧಿಕಾರಿಗಳು & ಸಿಬ್ಬದಿಗಳನ್ನು ಮೊದಲ ಸಾಲಿಗೆ ಕರೆತಂದು ಅಂಗಾಂಗ ದಾನದ ಹಿಂದಿನ ಅವರ ಅಸಮಾನ್ಯ ಪ್ರಯತ್ನಗಳ ಬಗ್ಗೆ ತಿಳಿಸಲಾಯಿತ್ತು

ಕರ್ನಾಟಕದಲ್ಲಿ ಅಂಗಾಂಗ ದಾನದ ಮುಖ್ಯ ಕಾರಣಕರ್ತರಾದ, ಗೌರವಾನ್ವಿತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಡಾ. ಕೆ ಸುಧಾಕರ್ ರವರು ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಅಂಗಾಂಗ ದಾನದಲ್ಲಿ ಪ್ರಮುಖ ಪಾತ್ರವಹಿಸಿದ ಜೀವಸಾರ್ಥಕತೆ / SOTTO ಕರ್ನಾಟಕದ ತಂಡ, ಟಿಟಿಕ್ ಲ್ಯಾಬ್ ತಂತ್ರಜ್ಞರು, ಪೊಲೀಸ್ ಅಧಿಕಾರಿಗಳು ಮತ್ತು ವಿಮಾನ ನಿಲ್ದಾಣದ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.


















**19.01.2023: ಬಂಟ್ವಾಳ ತಾಲೂಕಿನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಬಂಟ್ವಾಳ ತಾಲೂಕಿನ ಕಾಮಾಜೆಯಲ್ಲಿರುವ ಸರಕಾರಿ ಕಾಲೇಜಿನ ಎನ್‌ಎಸ್‌ಎಸ್ ಪದವಿ ವಿದ್ಯಾರ್ಥಿಗಳಿಗೆ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ ನಡೆಯಿತು. ಕಾಲೇಜಿನ ಎನ್‌ಎಸ್‌ಎಸ್ ಸಂಯೋಜಕರ ಬೆಂಬಲದೊಂದಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಜೀವಸಾರ್ಥಕಥೆ ಮಂಗಳೂರು ವಿಭಾಗದ ಅಂಗ ಕಸಿ ಸಂಯೋಜಕಿ ಶ್ರೀಮತಿ ಲವೀನಾ ಗ್ಲಾಡಿಸ್ ಡಿಸೋಜಾ ಭಾಗವಹಿಸಿ ಅಂಗಾಂಗ ದಾನದ ವಿಧಾನ, ಅಂಗಾಂಗ ಕಸಿ ನೋಂದಣಿ ಮತ್ತು ಅದರ ಮಹತ್ವವನ್ನು ವಿವರಿಸಿದರು. ಅವರು ಆನ್‌ಲೈನ್ ಅಂಗಾಂಗ ದಾನದ ವಾಗ್ದಾನ ವ್ಯವಸ್ಥೆ ಮತ್ತು ಜೀವಸಾರ್ಥಕಥೆಯ ಪಾತ್ರ ಮತ್ತು ಜವಾಬ್ದಾರಿಯನ್ನು ವಿವರಿಸಿದರು. ಕಾರ್ಯಕ್ರಮದ ನಂತರ 05 ವಿದ್ಯಾರ್ಥಿಗಳು ಅಂಗಾಂಗ ದಾನದ ಪ್ರತಿಜ್ಞೆ ಮಾಡಿದರು. ಕಾರ್ಯಕ್ರಮದಲ್ಲಿ ಸುಮಾರು 75 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು ಡಯಾಲಿಸಿಸ್ ಪ್ರಕ್ರಿಯೆ ಮತ್ತು ಅಂಗಾಂಗ ದಾನಕ್ಕೆ ಸಂಬಂಧಿಸಿದ ಇತರ ಪ್ರಶ್ನೆಗಳನ್ನು ಚರ್ಚಿಸಿದರು.






**21.01.2023: D Y ಪಾಟೀಲ್ ವೈದ್ಯಕೀಯ ಕಾಲೇಜು ಮತ್ತು ವಿಶ್ವವಿದ್ಯಾಲಯ ಪುಣೆಯಲ್ಲಿ ZTCC ಯಿಂದ ಕಾರ್ಯಾಗಾರ:** ZTCC ಪುಣೆಯ ಅಂಗ ಕಸಿ ಸಂಯೋಜಕರಿಗೆ ವಲಯದಲ್ಲಿ ಅಂಗಾಂಗ ದಾನದ ಸಂಖ್ಯೆಯನ್ನು ಉತ್ತೇಜಿಸಲು ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಸಂಯೋಜಕರಿಗೆ ಮಾರ್ಗದರ್ಶನ ನೀಡಲು ಜೀವಸಾರ್ಥಕಥೆಯ ಮುಖ್ಯ ಅಂಗ ಕಸಿ ಸಂಯೋಜಕರಾದ ಶ್ರೀಮತಿ ಲಿಜಾಮೋಲ್ ಜೋಸೆಫ್ ರನ್ನು ವಿಷಯ ತಜ್ಞರಾಗಿ ಆಹ್ವಾನಿಸಲಾಗಿತ್ತು. ಅಂಗಾಂಗ ದಾನ ಉತ್ತೇಜನದ ದೃಷ್ಟಿಯಿಂದ ಹಲವು ವಿಷಯಗಳನ್ನು ಚರ್ಚಿಸಿದರು. ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.











**26.01.2023: ಸಿಂದನೂರು ತಾಲೂಕು ರಾಯಚೂರಿನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ ಅಂಗಾಂಗ ಮತ್ತು ದೇಹದಾನ ಜಾಗೃತಿ ಮತ್ತು ನೋಂದಣಿ ಶಿಬಿರವನ್ನು 26.01.2023 ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಎಂ ಮಹಿಳಾ ಕಾರ್ಯಕರ್ತೆ ಶ್ರೀಮತಿ ನೀಲಾ ಕೆ. ವಹಿಸಿಕೊಂಡಿದ್ದರು.

ಶ್ರೀ ಶೇಖಪ್ಪ ಬಿ.ಕಟ್ಟಿಮನಿ, JSK/SOTTO ಕರ್ನಾಟಕದ ಅಂಗ ಕಸಿ ಸಂಯೋಜಕರು ಭಾಗವಹಿಸಿ ಮಾನವ ಅಂಗಾಂಗ ದಾನ ಮತ್ತು ಅದರ ಮಹತ್ವದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು. ರಿಮ್ಸ್ ವೈದ್ಯಕೀಯ ಕಾಲೇಜಿನ ಅನ್ಯಾಟಮಿ ವಿಭಾಗದ ಎಚ್‌ಒಡಿ ಡಾ.ನವೀನ್ ವೈದ್ಯಕೀಯ ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ದೇಹದಾನ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಸಾರ್ವಜನಿಕ ಸಿಪಿಎಂ ಪಕ್ಷದ ಸದಸ್ಯರು RIMS ವೈದ್ಯಕೀಯ ಕಾಲೇಜು ಅಂಗರಚನಾ ಶಾಸ್ತ್ರ ಸಿಬ್ಬಂದಿ ಹಾಗೂ ಗ್ರೀನ್ ರಾಯಚೂರು ಸಂಸ್ಥೆಯ ಕಾರ್ಯದರ್ಶಿ ಶ್ರೀ ರಾಜೇಶದ್ರು ಶಿವಳೆ ದೇಹಾಂಗದಾನ ಜಾಗೃತಿ ಸಮಿತಿ ಸದಸ್ಯರು ಸೇರಿದಂತೆ 500 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.









**27.01.2023: SOTTO ಒಡಿಶಾದೊಂದಿಗೆ ವರ್ಚುವಲ್ ಸಭೆ:** ಒಡಿಶಾ ರಾಜ್ಯದಲ್ಲಿ ಅಂಗಾಂಗ ದಾನವನ್ನು ಸುಧಾರಿಸುವ ಕುರಿತು 27 ಜನವರಿ 2023 ರಂದು ವರ್ಚುವಲ್ ಸಭೆ ನಡೆಯಿತು. ಅಂಗಾಂಗ ದಾನ ಕಾರ್ಯಕ್ರಮದಲ್ಲಿ ಎರಡು ವರ್ಷಗಳ (2021 ಮತ್ತು 2022) SOTTO ಕರ್ನಾಟಕದ ಸಾಧನೆ ಆಧರಿಸಿ SOTTO ಒಡಿಶಾ ಸಂಯೋಜಕರೊಂದಿಗೆ ಜ್ಞಾನ ವಿನಿಮಯಕ್ಕಾಗಿ SOTTO ಕರ್ನಾಟಕವನ್ನು ಸಭೆಗೆ ಆಹ್ವಾನಿಸಲಾಗಿತ್ತು.

ಜೀವಸಾರ್ಥಕಥೆ/ SOTTO ಕರ್ನಾಟಕದ ಮುಖ್ಯ ಅಂಗ ಕಸಿ ಸಂಯೋಜಕರಾದ ಶ್ರೀಮತಿ ಲಿಜಾಮೋಲ್ ಜೋಸೆಫ್ ಅವರು ಸಭೆಯಲ್ಲಿ ಭಾಗವಹಿಸಿ 2022 ನೇ ವರ್ಷದಲ್ಲಿ ಕರ್ನಾಟಕ ರಾಜ್ಯವು ಅಂಗಾಂಗ ದಾನದಲ್ಲಿ ಉತ್ತಮ ಸಂಖ್ಯೆಯನ್ನು ಸಾಧಿಸಿದ ವಿಧಾನಗಳನ್ನು ವಿವರಿಸಿದರು. ಅವರು ಒಡಿಶಾದ ಕಸಿ ಸಂಯೋಜಕರ ಪ್ರಶ್ನೆಗಳಿಗೆ ಸಹ ಸೂಕ್ತ ಪರಿಹಾರ ಒದಗಿಸಿದರು. ಅವರು ಅಂಗಾಂಗ ದಾನಿಗಳ ಕುಟುಂಬದೊಂದಿಗೆ ದುಃಖ ಸಮಾಲೋಚನೆಯನ್ನು ಹೇಗೆ ಮಾಡಬೇಕು, ಮತ್ತು ಅದರ ಹಂತಗಳು, ಅಂಗಾಂಗ ದಾನಕ್ಕಾಗಿ ಕುಟುಂಬವನ್ನು ಹೇಗೆ ಸಂಪರ್ಕಿಸಬೇಕು ಮತ್ತು ದಾನಕ್ಕಾಗಿ ಅನುಸರಿಸಬೇಕಾದ ಪ್ರೋಟೋಕಾಲ್‌ಗಳ ಕುರಿತು ಚರ್ಚಿಸಿದರು.





**27.01.2023: ಕಲಬುರಗಿಯ ಅಲ್-ಕರೀಮ್ ನರ್ಸಿಂಗ್ ಕಾಲೇಜಿನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಕಲಬುರಗಿಯ ಆಲ್-ಕರೀಂ ನರ್ಸಿಂಗ್ ಕಾಲೇಜುನಲ್ಲಿ ಅಂಗದಾನ, ದೇಹದಾನ, ನೇತ್ರದಾನ ಜಾಗೃತಿ ಮತ್ತು ನೋಂದಣಿ ಶಿಬಿರವನ್ನು ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ಆಯೋಜಿಸಲಾಗಿತ್ತು. ಡಾ.ಶಿವಾನಂದ ಹೂಗಾರ ಮಾತನಾಡಿ, ದೇಹ, ನೇತ್ರ, ಅಂಗಾಂಗ ದಾನ ಎಲ್ಲ ದಾನಗಳಿಗಿಂತ ಶ್ರೇಷ್ಠವಾದುದು ಎಂದು ಹೇಳಿದರು. ಕಾರ್ಯಕ್ರಮ ಸಂಯೋಜಕ ಪ್ರಶಾಂತ ಚೌಗುಲೆ ಕಾರ್ಯಕ್ರಮ ನಿರೂಪಿಸಿದರು. ಕರ್ನಾಟಕ ಪತ್ರಕರ್ತರ ಸಂಘದ ಕಾರ್ಯದರ್ಶಿ ಶ್ರೀ ಸಂಗಮನಾಥ ರೇವಟಗಾಂವ, ಬಿಟಿಜಿಎಚ್ ನೇತ್ರ ಬ್ಯಾಂಕ್‌ನ ಡಾ.ಶ್ರೇಯಾ, ಬ್ರಹ್ಮಾಪುರ ಪಿಎಸ್ಐ ಯಶೋದಾ ಕಟಕೆ,. ಅಲ್-ಕರೀಮ್ ನರ್ಸಿಂಗ್ ಕಾಲೇಜು ಸಿಬ್ಬಂದಿ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಸೇರಿ 200 ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

